# ಎಲ್ಲಾ ಕೊಂಡುಕೊಳ್ಳಬಹುದು!

ದುಡ್ಡಿನಿಂದ ಎಲ್ಲವನ್ನೂ ಕೊಂಡುಕೊಳ್ಳಬಹುದು ಅಂದುಕೊಂಡಿದ್ದೇವೆ. ಹಾಗೆ ಅಂದುಕೊಂಡ ದುಡ್ಡನ್ನು ಗುಡ್ಡೆ ಹಾಕಿಕೊಂಡಿರುವವರೂ ಆ ಎಲ್ಲವನ್ನೂ ಕೊಂಡುಕೊಂಡಿರುವುದಿಲ್ಲ. ತಾವು ಕೊಂಡುಕೊಳ್ಳಬಲ್ಲೆವು ಅಂದುಕೊಂಡು ಈ ಅನಿಸಿಕೆಯಲ್ಲಿಯೇ ತೃಪ್ತರಾಗಿರುತ್ತಾರಲ್ಲದೆ ಅಂದರೆ ಈ ಅನಿಸಿಕೆಯುಂಟುಮಾಡುವ ಭ್ರಾಮಕತೆಯೇ ನಮ್ಮ ಮನಸ್ಸಿಗೆಮುಖ್ಯವಲ್ಲದೆ ಎಲ್ಲವನ್ನೂ ಕೊಂಡುಕೊಳ್ಳುವುದಲ್ಲ. ಎಲ್ಲ ಕೊಂಡುಕೊಳ್ಳುವುದು ವ್ಯವಹಾರ್ಯವೂ ಅಲ್ಲ. ವ್ಯವಹಾರ್ಯವಲ್ಲವೆಂದ ಮೇಲೆ, ಎಲ್ಲವನ್ನೂ ಎನ್ನುವಲ್ಲಿ ನಮಗೆ ನಿಜಕ್ಕೂ ಅಗತ್ಯವಿಲ್ಲದ ವಸ್ತುಗಳನ್ನೂ ನಾವು ಕೊಂಡುಕೊಳ್ಳಬಲ್ಲವರಾಗಿರುವೆವು ಎಂದು ತಾನೇ ಅರ್ಥ? ನಮಗೆ ಬೇಕಿಲ್ಲದುದನ್ನೂ ನಾವು ಪಡೆಯಬಲ್ಲೆವು ಎಂದು ನಮ್ಮಲೇ ಬೀಗಿಕೊಂಡಿರುವುದು ನಮ್ಮ ಮನಸ್ಸಿನ ಒಂದು ವಿಚಿತ್ರವಿದ್ಯಮಾನವಾಗಿದೆ! ಈ ವಿದ್ಯಮಾನವು, ಮನಸ್ಸು ನಿಯಂತ್ರಣಕ್ಕೆ ಒಳಪಡದಿದ್ದರೆ ಎಷ್ಟು ಹಾಸ್ಯಾಸ್ಪದವಾಗುತ್ತದೆ ಎಂಬುದಕ್ಕೆ ಸೂಚಕವಾಗಿದೆ.

ನಾವು ನಮಗೆ ಬೇಡವಾದುದನ್ನೂ ಪಡೆಯಲು ಶಕ್ತರಾಗಬೇಕೆ? ಅದು ನಿಜಕ್ಕೂ ನಮ್ಮ ಶಕ್ತಿಯೆ? ಶಕ್ತಿ ಎಂದೊಪ್ಪಿ ಈ ಶಕ್ತಿ ನಮ್ಮಲ್ಲಿ ಇರದಿದ್ದರೆ ಅದಕ್ಕಾಗಿ ಕೊರಗುತ್ತೇವಲ್ಲ! ಇದೇನು ಪಾಡು? ಈ ಶಕ್ತಿಯ ಹಿಂದೆ ಬಿದ್ದು– ನಮಗೆ ನಿಜವಾಗಿ ಬೇಕಾದುದೇನು– ಬೇಡವಾದುದೇನು ಎಂದು ತಿಳಿಯುವ ವಿವೇಚನೆಯನ್ನೇ ಈ ಶಕ್ತಿಗೆ ಬಲಿಗೊಟ್ಟಂತಾಯಿತಲ್ಲ! ದುಡ್ಡಿಗಿಂತ ಹೆಚ್ಚು, ಅದು ಉಂಟುಮಾಡುವ ಭ್ರಮೆಯ ಮಾನಸಿಕತೆಯೇ ನಮಗೆ ಮುಖ್ಯವಾಗಿದೆ. ಅಂದರೆ ನಮಗೆ ಗೊತ್ತಿಲ್ಲದೇ ನಮ್ಮ ಮನಸ್ಸಿನ ಕಾಲ್ಪನಿಕ ಶಕ್ತಿಯನ್ನೇ ನಾವು ನಂಬಿರುವುದು ದುಡ್ಡನ್ನಲ್ಲ.

ದುಡ್ಡು ಕಡಿಮೆ ಇರುವ ನಾವು ಇದಕ್ಕೆ ಭಿನ್ನವಾದ ಸ್ಥಿತಿಯಲ್ಲಿ ಇರುತ್ತೇವೆ. ನಾವುಕೊಂಡುಕೊಳ್ಳಲಾರದವರು ಕೆಲವೊಮ್ಮೆ ಬೇಕಾದುದನ್ನು ಕೂಡ ಎಂದುಕೊಂಡು ಕೊರಗುತ್ತಿರುತ್ತೇವೆ. ಈ ಬೇಕಾದುದು ಅಗತ್ಯವಾದುದು ಎಂಬುದೆಲ್ಲ ನಿಜಕ್ಕೂ ಬೇಕಾಗಿದೆಯೆ? ಅಗತ್ಯವಾದುದೆ? ಎಂದು ಶೋಧಿಸಿ ಕಂಡುಕೊಂಡ ಸತ್ಯಗಳೇನಲ್ಲ. ಸುತ್ತಲಿನ ಜನರಲ್ಲಿ ಇದ್ದುದು, ನಮ್ಮಲ್ಲೂ ಇರಬೇಕಾದುದು ಅಗತ್ಯವೆಂದೇ ನಾವು ಅಂದುಕೊಂಡಿರುವುದಲ್ಲದೆ ಪರೀಕ್ಷಿಸಿ ಕಂಡುಕೊಂಡುದಲ್ಲ. ನಿಜಕ್ಕೂ ಬೇಕಾದುದನ್ನು ಕೊಂಡುಕೊಳ್ಳಲಾಗದಿದ್ದರೆ ಕೊರಗುಂಟಾಗುವುದು ಸಹಜವೇ. ಹೀಗೊಂದು ಕೊರಗು ಉಂಟಾಗಬೇಕಾದುದು ಒಳ್ಳೆಯ ಬದುಕನ್ನು ಕಂಡುಕೊಳ್ಳುವುದಕ್ಕೆ ಮುಖ್ಯವಾದುದೂ ಹೌದು. ಆದರೆ ನಮ್ಮಲ್ಲಿ ಉಂಟಾಗುವ ಈ ಸಹಜ ಕೊರಗು, ದುಡ್ಡಿನ ಹಿಂದೆ ಬಿದ್ದ ಲೋಕದ ಮಾನಸಿಕತೆಯ ವಿಮರ್ಶೆಯನ್ನು ನಮ್ಮಲ್ಲಿ ಉಂಟು ಮಾಡಬೇಕಲ್ಲ? ವಿಮರ್ಶೆ ಇಲ್ಲದ ಕೊರಗು ಮತ್ತೆ ನಾವು ಲೋಕವನ್ನು ಕುರುಡಾಗಿ ಅನುಸರಿಸುವ ಪ್ರಯಾಸದಲ್ಲಿ ಕೊನೆಯಾಗುವ ಅಪಾಯವಿದ್ದೇ ಇದೆ. ಲೋಕದ ಮಾನಸಿಕತೆಯ ವಿಮರ್ಶೆ ಎಂದಾಗ ಅದು ನಮ್ಮ ಮನಸ್ಸನ್ನು ನಾವು ವಿಮರ್ಶೆಗೆ ಒಡ್ಡಿಕೊಂಡಂತೆ ಕೂಡ. ಆಗ ನಮ್ಮ ಮನಸ್ಸಿನ ಭ್ರಮೆಯನ್ನು ಉಂಟುಮಾಡುವ ಶಕ್ತಿಯೇ ಪರೀಕ್ಷೆಗೆ ಒಳಪಡುವುದು. ಒಳಪಟ್ಟು ಮನಸ್ಸು ತನ್ನನ್ನೇ ತಾನು ಮೀರುತ್ತ ತಾನು ಕಟ್ಟಿಕೊಂಡ ಸೆರೆಮನೆಯಿಂದ ತಾನೇ ಬಿಡುಗಡೆ ಪಡೆಯುತ್ತ ಮುನ್ನಡೆಯುವುದು. ಆಗ ದುಡ್ಡು ಎಲ್ಲಿರಬೇಕೋ ಅಲ್ಲಿ ಬಿದ್ದುಕೊಂಡಿರುವುದು ಅಷ್ಟೇ.

ದುಡ್ಡು ಎಂಬ ಈ ಪದವನ್ನು ಕಣ್ಣಿಟ್ಟು ನೋಡಿ. ದುಡ್ಡನ್ನಲ್ಲ. ದುಡಿ ಮತ್ತು ದುಡ್ಡು ಒಂದೇ ಮೂಲದಿಂದ ಬಂದ ಪದಗಳು. ನಾವು ದುಡಿದು ಪಡೆದದ್ದು ದುಡ್ಡು. ದುಡಿಯದೆ ಪಡೆದುದು ಯಾವುದೂ ದುಡ್ಡಲ್ಲ. ಅದು ಇನ್ನೇನೋ ಆಗಿರಬಹುದು; ದುಡ್ಡಂತೂ ಅಲ್ಲ ದುಡ್ಡು ದುಡಿದರು ಎಂದು ಹೇಳುತ್ತಿರುತ್ತೇವೆ. ಇದು ಪುನರುಕ್ತಿ ಮಾಡಿದಂತೆ. ದುಡ್ಡೆಂದರೆ ದುಡಿದದ್ದೇ ಆಗಿದೆ! ಅದನ್ನು ಮರಳಿ ಹೇಳಬೇಕಿಲ್ಲ. ಆದರೆ ಮರಳಿ ಹೇಳಬೇಕಾದ ಅಗತ್ಯವಿದೆ– ನಮ್ಮ ಸಂದರ್ಭದಲ್ಲಿ. ಏಕೆಂದರೆ ನಾವು ದುಡಿಯದೆ ದುಡ್ಡು ಮಾಡುವವರು! ದುಡಿಯದೆ ದುಡ್ಡು ಮಾಡಬೇಕೆಂದು ಯೋಚಿಸುವ ಜನ ಶಬ್ದಾರ್ಥಗಳನ್ನೇ ಕೆಡಿಸುವರು. ಭಾಷೆಯನ್ನೇ ಕೆಡಿಸುವರು. ತಮ್ಮ ನಾಲಗೆಯನ್ನೇ ಕೆಡಿಸಿಕೊಳ್ಳುವರು!

ದುಡ್ಡಿನಿಂದ ಏನನ್ನು ಕೊಂಡುಕೊಳ್ಳಬಹುದು? ಆರೋಗ್ಯವನ್ನು. ದುಡಿತದಿಂದ ಸಹಜವಾಗಿ ಉಂಟಾಗುವ ಆರೋಗ್ಯವನ್ನು. ಬದುಕಿಗೆ ಅಗತ್ಯವಾಗಿ ಬೇಕಾದ ವಸ್ತುಗಳನ್ನು; ಯಾವುದು ಅಗತ್ಯ ಯಾವುದು ಅನಗತ್ಯ ಎಂಬ ವಿವೇಚನೆಯನ್ನು ಕೂಡ. ಅನಗತ್ಯ ವಸ್ತುಗಳ ಉತ್ಪಾದನೆಯನ್ನಾದರೂ ಏಕೆ ಮಾಡುತ್ತಾರೆ ಎಂಬ ವಿಮರ್ಶೆಯನ್ನು ಕೂಡ. ಈ ವಿಮರ್ಶೆಯಿಂದ, ಲೋಕ, ಯಾವ ಭ್ರಾಮಕ ಮನಃಸ್ಥಿತಿಯಲ್ಲಿದೆ ಎಂಬ ಅರಿವನ್ನು ಕೂಡ.

ದುಡಿಯದ ದುಡ್ಡಿನಿಂದ (ಕ್ಷಮೆ ಇರಲಿ, ಈ ಪದವನ್ನು ಬಳಸಿರುವುದಕ್ಕೆ) ಏನನ್ನು ಏನನ್ನೆಲ್ಲ ಕೊಂಡು ಕೊಳ್ಳಬಹುದು? ಭಯವನ್ನು. ಈ ದುಡ್ಡನ್ನು ಹೇಗೆ ಕಾಪಾಡಿಕೊಳ್ಳುವುದು ಎಂಬ ಭಯವನ್ನು. ಎಲ್ಲರ ಕಣ್ಣೂ ಈ ದುಡಿಯದ ದುಡ್ಡಿನ ಮೇಲೆ ಇರುವುದರಿಂದ ಏಕೆಂದರೆ ಇದು ಎಲ್ಲರ ದುಡ್ಡೂ ಆಗಿರುತ್ತದೆಯಲ್ಲವೆ? ಎಲ್ಲರಿಂದ ಇದನ್ನು ಕಾಪಾಡುವುದು ಹೇಗೆ ಎಂಬ ಆಳದ ಭಯವನ್ನು. ಎಲ್ಲರಿಂದ ಕಾಪಾಡಬೇಕಾದುದರಿಂದ, ಅದಕ್ಕಾಗಿ ಇನ್ನಷ್ಟು ದುಡ್ಡು ಬೇಕಾಗಿ ಬರುವುದರಿಂದ ದುಡ್ಡಿಗಾಗಿ ಮತ್ತಷ್ಟು ಹಪಹಪಿಯನ್ನು, ಅಶಾಂತಿಯನ್ನು. ಲೋಕವೆಲ್ಲ ತನ್ನ ಎದುರಾಳಿಗಳು ಎಂಬ ಭಾವವನ್ನು. ಈ ಲೋಕ ಸುಲಿಗೆಕೋರ ಲೋಕ ಎಂಬ ಅಸೂಯೆಯನ್ನು. ತನ್ನೊಳಗಿನ ಸತ್ಯವೇ ಲೋಕದಲ್ಲಿ ಪ್ರತಿಫಲಿಸುತ್ತಿದೆ ಎಂದು ತಿಳಿದರೂ ತಿಳಿಯಲಾಗದ ಅವಿವೇಕವನ್ನು.

ಎಲ್ಲವನ್ನೂ ಕೊಂಡುಕೊಳ್ಳಲಾಗಬಹುದು ಎಂದಾಗ ಇವೆಲ್ಲವೂ ಸೇರಿವೆಯಲ್ಲವೆ?

■ **ತೋಷ**

## ಮಾತೇ ಮುತ್ತು

★ ಸಾವು ಏನೂ ಅಲ್ಲ. ಆದರೆ ಸೋತು ಹೇಡಿಯಂತೆ ಬದುಕುವುದು ಪ್ರತಿದಿನ ಸತ್ತಂತೆ.

–ನೆಪೋಲಿಯನ್ ಬೊನಪಾರ್ಟ್

★ ಉತ್ತಮ ಆರೋಗ್ಯ ಮತ್ತು ದುರ್ಬಲ ನೆನಪು– ಇದನ್ನೇ ಸಂತೋಷ ಎನ್ನುತ್ತಾರೆ.

–ಆಲ್ಬರ್ಟ್ ಶೆವಿಟ್ಜರ್

★ ಗೆಳೆತನ ಎನ್ನುವುದನ್ನು ಶಾಲೆಯಲ್ಲಿ ಕಲಿಸುವುದಿಲ್ಲ. ಅದನ್ನು ಕಲಿಯಲಿಲ್ಲ ಎಂದಾದರೆ ನೀವು ಬದುಕಿನಲ್ಲಿ ಏನನ್ನೂ ಕಲಿತಂತೆ ಆಗುವುದಿಲ್ಲ.

-ಮುಹಮ್ಮದ್ ಅಲಿ

★ ಸಂತೋಷ ಎನ್ನುವುದು ಆಸ್ತಿ ಅಥವಾ ಚಿನ್ನದಲ್ಲಿಲ್ಲ. ಅದು ಅವರವರ ಆತ್ಮದಲ್ಲಿ ಹುಟ್ಟುತ್ತದೆ.

–ಡೆಮಾಕ್ರಿಟಸ್

★ ಅತ್ಯುತ್ತಮ ನಾಳೆಗೆ ಸಿದ್ಧತೆ ಮಾಡಬೇಕೆಂದರೆ ನಿಮ್ಮ ಇವತ್ತು ಚೆನ್ನಾಗಿರುವಂತೆ ನೋಡಿಕೊಳ್ಳಿ.

–ಜಾನ್ಸನ್ ಬ್ರೌನ್ ಜೂ.

★ ಕನಸುಗಳಲ್ಲಿ ನಂಬಿಕೆ ಇಟ್ಟುಕೊಳ್ಳಿ. ಅಲ್ಲಿ ಸ್ವರ್ಗದ ಬಾಗಿಲುಗಳು ಅಡಗಿವೆ.

-ಖಲೀಲ್ ಗಿಬ್ರಾನ್

★ ಜಗತ್ತಿನಲ್ಲಿ ಯಾರೂ ಅಪರಿಚಿತರಿಲ್ಲ. ನೀವು ಇನ್ನಷ್ಟೇ ಭೇಟಿ ಆಗಬೇಕಾದ ಗೆಳೆಯರಷ್ಟೇ ಇರುತ್ತಾರೆ.

–ವಿಲಿಯಂ ಬಟ್ಲರ್ ಯೀಟ್ಸ್

★ ಕ್ರೀಡೆಯೆಂದರೆ ಯುದ್ಧವಲ್ಲ. ಸುಮ್ಮನೆ ಆಟವಾಡಿ. ಆಟದ ಸಂತೋಷವನ್ನು ಅನುಭವಿಸಿ.

-ಮೈಕೆಲ್ ಜೋರ್ಡಾನ್

★ ಮರವನ್ನು ಹಣ್ಣಿನಿಂದ ಗುರುತಿಸುತ್ತೇವೆ. ಹಾಗೆಯೇ ಗೆಳೆಯರನ್ನು ಅವರ ಒಳ್ಳೆಯ ಕೆಲಸಗಳಿಂದ ಗುರುತಿಸಿ.

–ಸಂತ ಬೇಸಿಲ್

★ ಸಂಶೋಧನೆ ಎಂದರೆ ಹೊಸ ಜ್ಞಾನವನ್ನು ಸೃಷ್ಟಿಸುವುದು.

–ನೀಲ್ ಆರ್ಮ್‌ಸ್ಟ್ರಾಂಗ್

★ ಇವತ್ತಿನ ಸಂತೋಷದ ಕ್ಷಣಗಳು, ನಾಳೆಯ ದುಃಖದ ಆಲೋಚನೆಗಳಾಗುತ್ತವೆ.

-ಬಾಬ್ ಮಾರ್ಲೆ

ಸ್ನೇಹಿತರಾಗಲೀ, ಶತ್ರುಗಳಾಗಲೀ ನಿಮ್ಮನ್ನು ಕೆಟ್ಟ ದಾರಿಗೆ ತಳ್ಳುವುದಿಲ್ಲ; ನಿಮ್ಮ ಮನಸ್ಸು ತಳ್ಳುತ್ತದೆ.

-ಗೌತಮ ಬುದ್ಧ